ಸದನದಲ್ಲಿ ಉತ್ತರಿಸುವ
ಪ್ರಶ್ನೆಗಳ ಪಟ್ಟಿ

ಒಟ್ಟು ಪ್ರಶ್ನೆಗಳು – ೧೫

**ಪಟ್ಟಿ–೦೧**

# ಕರ್ನಾಟಕ ವಿಧಾನಸಭೆ

## ಹದಿನಾರನೇ ವಿಧಾನಸಭೆ

## ಮೂರನೇ ಅಧಿವೇಶನ

**ಮಂಗಳವಾರ, ದಿನಾಂಕ: ೧೩ನೇ ಫೆಬ್ರವರಿ, ೨೦೨೪**

---

## ಸಮೂಹ – 'ಆ - B'

೧. ಮಾನ್ಯ ಮುಖ್ಯ ಮಂತ್ರಿಗಳು

೨. ಮಾನ್ಯ ಉಪ ಮುಖ್ಯ ಮಂತ್ರಿಗಳು

೩. ಮಾನ್ಯ ಗೃಹ ಸಚಿವರು

೪. ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಸಚಿವರು

೫. ಮಾನ್ಯ ಕಾರ್ಮಿಕ ಸಚಿವರು

೬. ಮಾನ್ಯ ಅಬಕಾರಿ ಸಚಿವರು

೭. ಮಾನ್ಯ ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು

---

## ಕಾಮಗಾರಿಗೆ ಅನುದಾನ ಬಿಡುಗಡೆ

**ಶ್ರೀ ಎಸ್ ಎನ್ ನಾರಾಯಣಸ್ವಾಮಿ ಕೆ ಎಂ (ಬಂಗಾರಪೇಟೆ) –**

೧ (೬೨) ಮಾನ್ಯ ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಕಳೆದ ಮೂರು ವರ್ಷಗಳಲ್ಲಿ ಬಂಗಾರಪೇಟೆ ಮತಕ್ಷೇತ್ರದ ವ್ಯಾಪ್ತಿಯಲ್ಲಿ ಸಣ್ಣ ನೀರಾವರಿ ಇಲಾಖೆಯ ಯಾವ ಯಾವ ಲೆಕ್ಕ ಶೀರ್ಷಿಕೆಯಲ್ಲಿ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ; (ಸಂಪೂರ್ಣ ಮಾಹಿತಿ ನೀಡುವುದು)

(ಆ) ಈ ಕ್ಷೇತ್ರದಲ್ಲಿ ಸಣ್ಣ ನೀರಾವರಿ ಇಲಾಖೆಯ ಕಾಮಗಾರಿಗಳಿಗೆ ಸಲ್ಲಿಸಿರುವ ಪ್ರಸ್ತಾವನೆಗಳ ಸಂಖ್ಯೆ ಎಷ್ಟು; (ಕಾಮಗಾರಿವಾರು ಮಾಹಿತಿ ನೀಡುವುದು)

(ಇ) ಈ ಪ್ರಸ್ತಾವನೆಯಲ್ಲಿರುವ ಕಾಮಗಾರಿಗಳಿಗೆ ಅನುದಾನ ಬಿಡುಗಡೆ ಮಾಡಲು ಸರ್ಕಾರ ಕ್ರಮ ಕೈಗೊಳ್ಳುವುದೇ;

(ಈ) ಹಾಗಿದ್ದಲ್ಲಿ, ಈ ಕಾಮಗಾರಿಗಳನ್ನು ಯಾವ ಕಾಲಮಿತಿಯೊಳಗಾಗಿ ಪೂರ್ಣಗೊಳಿಸಲಾಗುವುದು?

## ನಾಲೆಗಳು ಶಿಥಿಲಗೊಂಡು ಕುಸಿಯುತ್ತಿರುವುದು

**ಶ್ರೀ ಸಿಮೆಂಟ್ ಮಂಜು (ಸಕಲೇಶಪುರ) –**

೨ (೨೮೧) ಮಾನ್ಯ ಉಪ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಹಾಸನ ಜಿಲ್ಲೆಯ ಯಗಚಿ ಜಲಾಶಯದ ಮುಖ್ಯ ನಾಲೆ, ಉಪ ನಾಲೆ ಹಾಗೂ ವಿತರಣಾ ನಾಲೆಗಳು ಶಿಥಿಲಗೊಂಡು ಹಾಳಾಗಿ ಕುಸಿಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; (ಮಾಹಿತಿ ನೀಡುವುದು)

(ಆ) ಈ ಜಲಾಶಯವನ್ನು ಎಷ್ಟು ವರ್ಷಗಳ ಹಿಂದೆ ನಿರ್ಮಿಸಲಾಗಿದೆ; ಈ ಜಲಾಶಯ ನಿರ್ಮಾಣ ಮಾಡಿದ ನಂತರ ಎಷ್ಟು ಬಾರಿ ಈ ನಾಲೆಗಳ ಆಧುನೀಕರಣ ಕಾಮಗಾರಿ ನಡೆದಿದೆ; ಇದಕ್ಕೆ ತಗುಲಿರುವ ಅಂದಾಜು ವೆಚ್ಚವೆಷ್ಟು; (ಮಾಹಿತಿ ನೀಡುವುದು)

(ಇ) ಈ ಜಲಾನಯನ ಅಚ್ಚುಕಟ್ಟು ಪ್ರದೇಶವು ಎಷ್ಟು ಎಕರೆ ವ್ಯಾಪ್ತಿಗೆ ನೀರನ್ನು ಒದಗಿಸುತ್ತದೆ; ರೈತರ ಬೇಡಿಕೆಗೆ ಅನುಗುಣವಾಗಿ ನೀರು ಪೂರೈಕೆ ಮಾಡಲಾಗುತ್ತಿದೆಯೇ; ಈ ಜಲಾಶಯ ವ್ಯಾಪ್ತಿಗೆ ಒಳಪಡುವ ನೀರಾವರಿ ವಂಚಿತವಾಗಿರುವ ಪ್ರದೇಶಗಳಾವುವು; (ಮಾಹಿತಿ ನೀಡುವುದು)

(ಈ) ರೈತರ ಹಿತದೃಷ್ಟಿಯಿಂದ ಯಾವ ಕಾಲಮಿತಿಯೊಳಗೆ ಈ ಯಗಚಿ ಜಲಾಶಯದ ಮುಖ್ಯ ನಾಲೆ, ಉಪ ನಾಲೆ ಹಾಗೂ ವಿತರಣಾ ನಾಲೆಗಳನ್ನು ಆಧುನೀಕರಣಗೊಳಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ? (ಸಂಪೂರ್ಣ ಮಾಹಿತಿ ನೀಡುವುದು)

## ಅಕ್ರಮ ಮದ್ಯ ಮಾರಾಟ

**ಶ್ರೀ ಧೀರಜ್ ಮುನಿರಾಜು (ದೊಡ್ಡಬಳ್ಳಾಪುರ) –**

೩ (೩೯೪) ಮಾನ್ಯ ಅಬಕಾರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಹೊರ ರಾಜ್ಯಗಳಿಂದ ಅನಧಿಕೃತವಾಗಿ ಮದ್ಯವನ್ನು ತಂದು ಅಕ್ರಮವಾಗಿ ದೊಡ್ಡಬಳ್ಳಾಪುರದ ಮನೆ ಮನೆಗಳಲ್ಲಿ ಮಾರಾಟ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಹಾಗಿದ್ದಲ್ಲಿ, ಕಳೆದ ಮೂರು ವರ್ಷಗಳಿಂದ ಈವರೆಗೆ ದೊಡ್ಡ ಬಳ್ಳಾಪುರದ ವಿವಿಧ ಪೊಲೀಸ್ ಠಾಣೆಗಳಲ್ಲಿ ದಾಖಲಾಗಿರುವ ಪ್ರಕರಣಗಳು ಎಷ್ಟು; ಸದರಿ ಪ್ರಕರಣಗಳಲ್ಲಿ ಎಷ್ಟು ಜನರ ವಿರುದ್ಧ ಯಾವ ಕ್ರಮ ಕೈಗೊಳ್ಳಲಾಗಿದೆ; ಅವರ ವಿರುದ್ಧ ಹೂಡಿರುವ ಪ್ರಕರಣಗಳು ಯಾವುವು;

(ಇ) ಅನಧಿಕೃತ ಮದ್ಯ ಮಾರಾಟ ಮಾಡುತ್ತಿದ್ದ ಎಷ್ಟು ಬಾರ್ ಹಾಗೂ ವೈನ್ ಶಾಪ್‌ಗಳನ್ನು ಮುಚ್ಚಿಸಲಾಗಿದೆ;

(ಈ) ಅನಧಿಕೃತ ಮದ್ಯ ಮಾರಾಟವನ್ನು ತಡೆಯಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?

## ಮರವಂತೆ ಬೀಚ್‌ಗೆ ಮೂಲಭೂತ ಸೌಲಭ್ಯಗಳು

**ಶ್ರೀ ಗುರುರಾಜ್ ಶೆಟ್ಟಿ ಗಂಟಿಹೊಳೆ (ಬೈಂದೂರು) –**

೪ (೬೭) ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಬೈಂದೂರು ವಿಧಾನ ಸಭಾ ಕ್ಷೇತ್ರ ವ್ಯಾಪ್ತಿಯಲ್ಲಿರುವ ತ್ರಾಸಿ–ಮರವಂತೆ ಬೀಚ್‌ನಲ್ಲಿ ಪಾರ್ಕಿಂಗ್, ಪ್ರವಾಸಿಗರ ಸುರಕ್ಷತೆ ಸೇರಿದಂತೆ ಇನ್ನಿತರ ಸಮಸ್ಯೆ ಉಂಟಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಬಂದಿದ್ದಲ್ಲಿ, ದೇಶದ ಆಕರ್ಷಣೀಯ ಸಮುದ್ರ ತೀರಗಳಲ್ಲಿ ಒಂದಾದ ಮರವಂತೆ ಬೀಚ್‌ನಲ್ಲಿ ಪ್ರಸ್ತುತ ಇರುವ ಅಸಮರ್ಪಕ ಪಾರ್ಕಿಂಗ್ ವ್ಯವಸ್ಥೆಯನ್ನು ಸರಿಪಡಿಸಲು ಸರ್ಕಾರದಿಂದ ಯಾವ ಕ್ರಮ ವಹಿಸಲಾಗಿದೆ; (ವಿವರ ಒದಗಿಸುವುದು)

(ಇ) ಇಲ್ಲದಿದ್ದಲ್ಲಿ, ಸದರಿ ಬೀಚ್‌ಗೆ ದಿನಂಪ್ರತಿ ಸಾಕಷ್ಟು ಪ್ರವಾಸಿಗರು ಆಗಮಿಸುತ್ತಿದ್ದು, ಪ್ರವಾಸಿಗರ ವಾಹನ ಸೇರಿದಂತೆ ಇನ್ನಿತರ ವಾಹನಗಳನ್ನು ರಾಷ್ಟ್ರೀಯ ಹೆದ್ದಾರಿ ಬದಿ ವಾಹನ ನಿಲ್ದಾಣವಿಲ್ಲದ ಕಡೆ ನಿಲ್ಲಿಸುತ್ತಿದ್ದು, ಇದರಿಂದಾಗಿ ಪ್ರವಾಸಿಗರ ಸುರಕ್ಷತೆಗೂ ಅಡ್ಡಿ ಉಂಟಾಗುತ್ತಿರುವ ಕಾರಣ ಸರ್ಕಾರದ ಸಾಕಷ್ಟು ಜಾಗದ ಲಭ್ಯತೆ ಇರುವುದರಿಂದ ಇಲ್ಲಿ ಸಮರ್ಪಕ ಪಾರ್ಕಿಂಗ್ ವ್ಯವಸ್ಥೆ ಕಲ್ಪಿಸಲು ಸರ್ಕಾರ ಕ್ರಮ ವಹಿಸುವುದೇ;

(ಈ) ಮುಖ್ಯವಾಗಿ ಮರವಂತೆ ಬೀಚ್ ಪಕ್ಕದಲ್ಲಿಯೇ ರಾಷ್ಟ್ರೀಯ ಹೆದ್ದಾರಿಯು ಹಾದುಹೋಗುವುದರಿಂದ ಇಲ್ಲಿ ದಾರಿ ದೀಪ ಹಾಗೂ ಪ್ರವಾಸಿಗರಿಗೆ ಅನುಕೂಲದ ಇನ್ನಿತರ ಸುರಕ್ಷತಾ ಯೋಜನೆಗಳನ್ನು ಒದಗಿಸಲು ಸರ್ಕಾರ ಕ್ರಮ ವಹಿಸುವುದೇ?

## ಕಾವೇರಿ ಕುಡಿಯುವ ನೀರಿನ ಸಂಪರ್ಕ

**ಶ್ರೀ ರಾಮಮೂರ್ತಿ ಸಿ ಕೆ (ಜಯನಗರ) –**

೫ (೫೪) ಮಾನ್ಯ ಉಪ ಮುಖ್ಯಮಂತ್ರಿಗಳು ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಜಯನಗರ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯ ಕೊಳಗೇರಿ (ಸ್ಲಂ) ಗಳಲ್ಲಿ ಹೊಸದಾಗಿ ನಿರ್ಮಾಣವಾಗಿರುವ ಮನೆಗಳಿಗೆ ಕಾವೇರಿ ಕುಡಿಯುವ ನೀರಿನ ಸಂಪರ್ಕ ಕಲ್ಪಿಸದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; (ಮಾಹಿತಿ ನೀಡುವುದು)

(ಅ) ಬಂದಿದ್ದಲ್ಲಿ, ಈ ನೀರಿನ ಸಂಪರ್ಕ ಕಲ್ಪಿಸಲು ಇರುವ ತಾಂತ್ರಿಕ ತೊಂದರೆಗಳೇನು; (ಪೂರ್ಣ ವಿವರ ನೀಡುವುದು)

(ಇ) ಹಾಗಾದರೆ ಇಂತಹ ಎಷ್ಟು ಮನೆಗಳಿಗೆ ಕಾವೇರಿ ಕುಡಿಯುವ ನೀರಿನ ಸಂಪರ್ಕ ನೀಡಲು ಬಾಕಿ ಇದೆ; ಯಾವ ಕಾಲಮಿತಿಯಲ್ಲಿ ಬಾಕಿ ಇರುವ ಮನೆಗಳಿಗೆ ನೀರಿನ ಸಂಪರ್ಕ ಕಲ್ಪಿಸಲು ಸರ್ಕಾರ ಕ್ರಮ ಕೈಗೊಳ್ಳುವುದು? (ಪೂರ್ಣ ಮಾಹಿತಿ ನೀಡುವುದು)

## ಖಾರ್ಲ್ಯಾಂಡ್ ಯೋಜನೆಯಡಿಯ ಕಾಮಗಾರಿಗಳು

**ಶ್ರೀ ಗುರ್ಮೆ ಸುರೇಶ್ ಶೆಟ್ಟಿ (ಕಾಪು) –**

೬ (೫೬) ಮಾನ್ಯ ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಸಮುದ್ರ ತೀರದ ಕರಾವಳಿ ಪ್ರದೇಶದಲ್ಲಿ ಸಮುದ್ರದ ಉಪ್ಪು ನೀರು ನದಿಯ ಮೂಲಕ ಕೃಷಿ ಭೂಮಿಗೆ ಹರಿದು, ಕೃಷಿ ಭೂಮಿಯ ಫಲವತ್ತತೆ, ಹಾನಿ ಹಾಗೂ ಬೆಳೆ ನಾಶವಾಗಿ ರೈತರು ಸಂಕಷ್ಟದಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಬಂದಿದ್ದಲ್ಲಿ, ಖಾರ್‍ಲ್ಯಾಂಡ್ ಯೋಜನೆಯಡಿಯಲ್ಲಿ ಸಮುದ್ರದ ಉಪ್ಪು ನೀರು ನದಿಯ ಮೂಲಕ ಕೃಷಿ ಭೂಮಿಗೆ ಹರಿಯದಂತೆ ತಡೆಯಲು ಅಣೆಕಟ್ಟು/ಬ್ಯಾರೇಜ್ ಕಾಮಗಾರಿಗೆ ಕಳೆದ ೩ ವರ್ಷಗಳಲ್ಲಿ ಉಡುಪಿ ಜಿಲ್ಲೆಗೆ ಮಂಜೂರು ಮಾಡಿದ ಅನುದಾನ ಎಷ್ಟು;

(ಇ) ಈ ಖಾರ್‍ಲ್ಯಾಂಡ್ ಯೋಜನೆಯಡಿಯಲ್ಲಿ ಮಂಜೂರು ಮಾಡಿದ ಅನುದಾನಕ್ಕೆ ತಕ್ಕಂತೆ ಸರ್ಕಾರ ಕೈಗೊಂಡ ಕಾಮಗಾರಿಗಳು ಯಾವ ಹಂತದಲ್ಲಿವೆ; (ಉಡುಪಿ ಜಿಲ್ಲೆಗೆ ಸಂಬಂಧಿಸಿದಂತೆ ಕಾಮಗಾರಿಗಳ ಪ್ರಗತಿಯ ವಿವರವನ್ನು ನೀಡುವುದು)

(ಈ) ಕಾಮಗಾರಿ ಪೂರ್ಣಗೊಳ್ಳದಿದ್ದಲ್ಲಿ, ಪ್ರಗತಿ ಹಂತ ಸಾಧಿಸಲು ಇರುವ ತಾಂತ್ರಿಕ ತೊಡಕುಗಳೇನು?

## ಕಾರ್ಮಿಕರಿಗೆ ಲೇಬರ್ ಕಾರ್ಡ್ ನೀಡಿರುವುದು

**ಶ್ರೀ ಸಿದ್ದು ಸವದಿ (ತೇರದಾಳ) –**

೭ (೨೩೪) ಮಾನ್ಯ ಕಾರ್ಮಿಕ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ತೇರದಾಳ ಮತಕ್ಷೇತ್ರದಲ್ಲಿ ಎಷ್ಟು ಕಾರ್ಮಿಕರು ಲೇಬರ್ ಕಾರ್ಡ್ ಪಡೆದಿದ್ದಾರೆ; ಯಾವ ಯಾವ ವಿಧದ ಕಾರ್ಮಿಕರು ನೋಂದಣಿಯಾಗಿ ಕಾರ್ಡ್ ಪಡೆದಿದ್ದಾರೆ; (ಸಂಪೂರ್ಣ ಮಾಹಿತಿ ಒದಗಿಸುವುದು)

(ಆ) ಯಾವ ಯಾವ ವಿಧದ ಕೂಲಿ ಕಾರ್ಮಿಕರು ಲೇಬರ್ ಕಾರ್ಡ್ ಪಡೆಯಲು ಅರ್ಹತೆಯನ್ನು ಹೊಂದಿರುತ್ತಾರೆ;

(ಇ) ಲೇಬರ್ ಕಾರ್ಡ್‌ಗಳನ್ನು ತೆಗೆದುಕೊಳ್ಳಲು ಇರುವ ನಿಯಮಾವಳಿಗಳಾವುವು;

(ಈ) ಒಂದು ವರ್ಷದಲ್ಲಿ ಎಷ್ಟು ಬಾರಿ ಕಾರ್ಮಿಕರಿಂದ ಅರ್ಜಿ ಸ್ವೀಕರಿಸಿ ಲೇಬರ್ ಕಾರ್ಡ್ ವಿತರಿಸಲಾಗುವುದು ಹಾಗೂ ಈ ಲೇಬರ್ ಕಾರ್ಡ್ ವಿತರಿಸುವ ಅಧಿಕಾರ ಯಾರು ಯಾರಿಗೆ ಇರುತ್ತದೆ? (ಸಂಪೂರ್ಣ ಮಾಹಿತಿ ಒದಗಿಸುವುದು)

## ಭದ್ರಾ ಮೇಲ್ದಂಡೆ ಯೋಜನೆಯ ಕಾಮಗಾರಿ

**ಶ್ರೀ ಸುರೇಶ್ ಬಾಬು ಸಿ ಬಿ (ಚಿಕ್ಕನಾಯಕನಹಳ್ಳಿ) –**

೮ (೨೨೪) ಮಾನ್ಯ ಉಪ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಚಿಕ್ಕನಾಯಕನಹಳ್ಳಿ ವಿಧಾನ ಸಭಾ ಕ್ಷೇತ್ರಕ್ಕೆ ಭದ್ರಾ ಮೇಲ್ದಂಡೆ ಯೋಜನೆಯಿಂದ ಎಷ್ಟು ಪ್ರಮಾಣದ ನೀರಿನ ಹಂಚಿಕೆ ಮಾಡಲಾಗಿದೆ;

(ಆ) ಈ ಯೋಜನೆಯಿಂದ ಎಷ್ಟು ಕೆರೆಗಳಿಗೆ ಹಾಗೂ ಎಷ್ಟು ನೀರಾವರಿ ಅಚ್ಚುಕಟ್ಟು ಪ್ರದೇಶಗಳಿಗೆ ನೀರು ಒದಗಿಸಲಾಗುತ್ತಿದೆ;

(ಇ) ಸದರಿ ಕಾಮಗಾರಿಗಳಿಗೆ ೨೦೨೨ ರಿಂದ ೨೦೨೪ನೇ ಸಾಲಿನ ಪ್ರಸ್ತುತ ಮಾಹೆಯವರೆಗೆ ಸರ್ಕಾರ ಮೀಸಲಿಟ್ಟಿರುವ ಅನುದಾನವೆಷ್ಟು ; ಈ ಕಾಮಗಾರಿಯು ಪ್ರಸ್ತುತ ಯಾವ ಹಂತದಲ್ಲಿದೆ; ಈ ಕಾಮಗಾರಿಗೆ ಈವರೆವಿಗೂ ಆಗಿರುವ ವೆಚ್ಚವೆಷ್ಟು;

(ಈ) ಈ ಯೋಜನೆಯಡಿ ಹನಿ ನೀರಾವರಿ ಕಾಮಗಾರಿಗಳು ಈವರೆವಿಗೂ ವೇಗ ಪಡೆಯದಿರಲು ಕಾರಣಗಳೇನು?

## ಅನುದಾನ ಬಿಡುಗಡೆ

**ಶ್ರೀ ವೆಂಕಟಶಿವಾರೆಡ್ಡಿ ಜಿ ಕೆ (ಶ್ರೀನಿವಾಸಪುರ) –**

೯ (೨೭೯) ಮಾನ್ಯ ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಶ್ರೀನಿವಾಸಪುರ ವಿಧಾನಸಭಾ ಕ್ಷೇತ್ರಕ್ಕೆ ೨೦೨೧–೨೨ ಹಾಗೂ ೨೦೨೨–೨೩ನೇ ಸಾಲಿನಲ್ಲಿ ಸಣ್ಣ ನೀರಾವರಿ ಇಲಾಖೆಯಿಂದ ಮಂಜೂರು ಮಾಡಿದ ಅನುದಾನವನ್ನು ತಡೆಹಿಡಿಯಲಾಗಿದ್ದು, ಸದರಿ ಅನುದಾನವನ್ನು ಯಾವಾಗ ಬಿಡುಗಡೆ ಮಾಡಲಾಗುವುದು;

(ಆ) ತಡೆಹಿಡಿಯಲಾದ ಅನುದಾನವನ್ನು ಬಿಡುಗಡೆ ಮಾಡಲು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿದ್ದು, ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು;

(ಇ) ಟೆಂಡರ್ ಹಂತದಲ್ಲಿರುವ ಇನ್ನೂ ಪ್ರಾರಂಭಿಸಬೇಕಾಗಿರುವ ಕಾಮಗಾರಿಗಳಿಗೆ ಅನುದಾನ ಬಿಡುಗಡೆ ಮಾಡಲು ಸರ್ಕಾರದಿಂದ ಯಾವ ಕ್ರಮ ಕೈಗೊಳ್ಳಲಾಗಿದೆ;

(ಈ) ಪ್ರಸಕ್ತ ಸಾಲಿನಲ್ಲಿ ಈ ವಿಧಾನಸಭಾ ಕ್ಷೇತ್ರಕ್ಕೆ ಸಣ್ಣ ನೀರಾವರಿ ಇಲಾಖೆಯ ವಿವಿಧ ಲೆಕ್ಕ ಶೀರ್ಷಿಕೆಗಳಡಿ ಮಂಜೂರು ಮಾಡಿದ ಒಟ್ಟು ಅನುದಾನವೆಷ್ಟು? (ವಿವರ ನೀಡುವುದು)

## ಜಲದುರ್ಗಾ ಪ್ರದೇಶದ ಅಭಿವೃದ್ಧಿ

**ಶ್ರೀ ಮಾನಪ್ಪ ಡಿ ವಜ್ಜಲ್ (ಲಿಂಗಸುಗೂರು) –**

೧೦ (೨೨೬) ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ರಾಯಚೂರು ಜಿಲ್ಲೆ, ಲಿಂಗಸುಗೂರು ತಾಲ್ಲೂಕಿನ ಜಲದುರ್ಗಾ ಪ್ರದೇಶವು ಪ್ರಮುಖ ಪ್ರವಾಸಿ ತಾಣವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಬಂದಿದ್ದಲ್ಲಿ, ಸದರಿ ಪ್ರವಾಸಿ ತಾಣವನ್ನು ವೀಕ್ಷಿಸಲು ರಾಜ್ಯ, ಅಂತರ್ ರಾಜ್ಯ ಹಾಗೂ ವಿದೇಶಗಳಿಂದ ಪ್ರವಾಸಿಗರು ಸಾಕಷ್ಟು ಸಂಖ್ಯೆಯಲ್ಲಿ ಆಗಮಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಇ) ಹಾಗಿದ್ದಲ್ಲಿ, ಈ ಪ್ರದೇಶವನ್ನು ಪ್ರೇಕ್ಷಣೀಯ ಸ್ಥಳವನ್ನಾಗಿ ಗುರುತಿಸಿ ಇದರ ಅಭಿವೃದ್ಧಿಗಾಗಿ ಸರ್ಕಾರವು ಯಾವ ಕ್ರಮ ಕೈಗೊಂಡಿದೆ;

(ಈ) ಪ್ರಸಕ್ತ ಸಾಲಿನಲ್ಲಿ ಈ ಪ್ರದೇಶದ ಅಭಿವೃದ್ಧಿ ಕಾರ್ಯ ಕೈಗೊಳ್ಳಲು ಸರ್ಕಾರಕ್ಕಿರುವ ತೊಂದರೆಗಳೇನು? (ಪೂರ್ಣ ವಿವರ ನೀಡುವುದು)

## ಎತ್ತಿನ ಹೊಳೆ ಯೋಜನೆ

**ಶ್ರೀ ಸುರೇಶ್ ಹೆಚ್ ಕೆ (ಬೇಲೂರು) –**

೧೧ (೨೧೭) ಮಾನ್ಯ ಉಪ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಬೇಲೂರು ವಿಧಾನಸಭಾ ಕ್ಷೇತ್ರದ ಬಿಕ್ಕೋಡು, ಮಾದಿಹಳ್ಳಿ, ಜಾವಗಲ್ ಹೋಬಳಿ ವ್ಯಾಪ್ತಿಯ ನೂರಾರು ಹಳ್ಳಿಗಳಲ್ಲಿ ಹಾದು ಹೋಗಿರುವ ಬೃಹತ್ ನೀರಾವರಿ ಯೋಜನೆಯಾದ ಎತ್ತಿನಹೊಳೆ ಯೋಜನೆಯಿಂದ ಕೆರೆಗಳಿಗೆ ನೀರು ತುಂಬಿಸುವ ಯೋಜನೆಯ ಪ್ರಗತಿ ಯಾವ ಹಂತದಲ್ಲಿದೆ;

(ಆ) ಎತ್ತಿನಹೊಳೆ ಯೋಜನೆಯ ಕಾಮಗಾರಿಗಳ ಕೆಲಸ ನಿರ್ವಹಿಸುತ್ತಿರುವ ಬೃಹತ್ ಗಾತ್ರದ ವಾಹನಗಳಿಂದ ಕ್ಷೇತ್ರದಲ್ಲಿನ ಅನೇಕ ಗ್ರಾಮಗಳ ರಸ್ತೆಗಳು ಹಾಳಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಇ) ಬಂದಿದ್ದಲ್ಲಿ, ಈ ಯೋಜನೆಯಿಂದ ಹಾಳಾಗಿರುವ ರಸ್ತೆಗಳ ಅಭಿವೃದ್ಧಿಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು; (ಪೂರ್ಣ ವಿವರವನ್ನು ನೀಡುವುದು)

(ಈ) ಮಾದಿಹಳ್ಳಿ, ಹಳೇಬೀಡು ಹೋಬಳಿಯ ಕೆರೆಗಳಿಗೆ ನೀರು ತುಂಬಿಸುವ ಮಹತ್ವದ ರಣಗಟ್ಟ ಯೋಜನೆ ಕಾಮಗಾರಿಯು ಕಳಪೆ ಗುಣಮಟ್ಟದಿಂದ ಹಾಗೂ ವಿಳಂಬ ಗತಿಯಲ್ಲಿ ಸಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಉ) ಬಂದಿದ್ದಲ್ಲಿ, ಸರ್ಕಾರ ಈ ಕುರಿತು ಕೈಗೊಂಡ ಕ್ರಮಗಳೇನು? (ವಿವರ ನೀಡುವುದು)

## ಉಪ ಪೊಲೀಸ್ ಠಾಣೆಯನ್ನು ಮೇಲ್ದರ್ಜೆಗೇರಿಸುವುದು

**ಶ್ರೀ ಶ್ರೀನಿವಾಸ ಜಿ ಹೆಚ್ (ತರೀಕೆರೆ) –**

೧೨ (೬೨) ಮಾನ್ಯ ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ತರೀಕೆರೆ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಅಜ್ಜಂಪುರ ಪಟ್ಟಣವು ನೂತನ ತಾಲ್ಲೂಕಾಗಿ ರಚನೆಯಾಗಿದ್ದು, ಇಡೀ ತಾಲ್ಲೂಕಿಗೆ ಒಂದೇ ಆರಕ್ಷಕ ಠಾಣೆ ಇದ್ದು, ಕಾರ್ಯವ್ಯಾಪ್ತಿ ಹೆಚ್ಚಾಗಿರುವುದರಿಂದ, ಅಪರಾಧ ಪ್ರಕರಣವನ್ನು ಇತ್ಯರ್ಥಪಡಿಸಲು ವಿಳಂಬವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಬಂದಿದ್ದಲ್ಲಿ, ಈ ತಾಲ್ಲೂಕು ವ್ಯಾಪ್ತಿಯ ಶಿವನಿ ಹೋಬಳಿ ಕೇಂದ್ರ ಸ್ಥಾನದಲ್ಲಿರುವ ಪೊಲೀಸ್ ಉಪಠಾಣೆಯನ್ನು ಪೊಲೀಸ್ ಠಾಣೆಯನ್ನಾಗಿ ಮೇಲ್ದರ್ಜೆಗೇರಿಸಲು ಇರುವ ಅಡತಡೆಗಳೇನು?

## ಮದಗ–ಮಾಸೂರ ಕಾಲುವೆ ಆಧುನೀಕರಣ

**ಶ್ರೀ ಯು ಬಿ ಬಣಕಾರ್ (ಹಿರೇಕೆರೂರು) –**

೧೩ (೩೬) ಮಾನ್ಯ ಉಪ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಮದಗ–ಮಾಸೂರ ಕೆರೆಯ ಕಾಲುವೆಗಳ ಆಧುನೀಕರಣ ಕುರಿತು ಸರ್ಕಾರಕ್ಕೆ ಸಲ್ಲಿಕೆಯಾಗಿರುವ ಪ್ರಸ್ತಾವನೆ ಪ್ರಸ್ತುತ ಯಾವ ಹಂತದಲ್ಲಿದೆ; (ಈ ಪ್ರಸ್ತಾವನೆಯ ವಿವರಗಳನ್ನು ಒದಗಿಸುವುದು)

(ಆ) ಈ ಯೋಜನೆಯ ಪ್ರಸ್ತಾವನೆಗೆ ತುರ್ತಾಗಿ ಮಂಜೂರಾತಿ ನೀಡಲು ಸರ್ಕಾರ ಕ್ರಮ ಕೈಗೊಳ್ಳುವುದೇ?

## ಪ್ರವಾಸೋದ್ಯಮವನ್ನು ಉತ್ತೇಜಿಸುವುದು

**ಶ್ರೀ ಮಹೇಶ್ ಟೆಂಗಿನಕಾಯಿ (ಹುಬ್ಬಳ್ಳಿ–ಧಾರವಾಡ ಕೇಂದ್ರೀಯ ) –**

೧೪ (೨೯೦) ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಹುಬ್ಬಳ್ಳಿ–ಧಾರವಾಡ ಸೆಂಟ್ರಲ್ ವಿಧಾನಸಭಾ ಕ್ಷೇತ್ರದಲ್ಲಿರುವ ನೃಪತುಂಗ ಬೆಟ್ಟವನ್ನು ಪ್ರವಾಸೋದ್ಯಮ ಇಲಾಖೆಯಿಂದ ಅಭಿವೃದ್ಧಿಗೊಳಿಸಲು ಸರ್ಕಾರ ಯಾವುದಾದರೂ ಯೋಜನೆಯನ್ನು ರೂಪಿಸಿದೆಯೇ; ಹಾಗಿದ್ದಲ್ಲಿ, ಈ ಯೋಜನೆಗಳ ಸಂಪೂರ್ಣ ಮಾಹಿತಿ ಒದಗಿಸುವುದು; ಇಲ್ಲದಿದ್ದಲ್ಲಿ, ಈ ಪ್ರದೇಶವನ್ನು ಅಭಿವೃದ್ಧಿಗೊಳಿಸಲು ಸರ್ಕಾರ ಯಾವ ಕ್ರಮ ಕೈಗೊಳ್ಳಲಾಗುವುದು;

(ಆ) ಈ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಸುಪ್ರಸಿದ್ಧ ಉಣಕಲ್ ಕೆರೆಯನ್ನು ಅಭಿವೃದ್ಧಿಗೊಳಿಸಿ, ಪ್ರವಾಸೋದ್ಯಮವನ್ನು ಉತ್ತೇಜಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ; ಇದ್ದಲ್ಲಿ, ಸರ್ಕಾರ ಕೈಗೊಂಡ ಕ್ರಮಗಳೇನು; (ಸಂಪೂರ್ಣ ಮಾಹಿತಿ ಒದಗಿಸುವುದು)

(ಇ) ಧಾರವಾಡ ಜಿಲ್ಲೆಯಲ್ಲಿ ಪ್ರವಾಸೋದ್ಯಮ ಸ್ಥಳಗಳು ಎಷ್ಟಿವೆ; (ವಿವರ ಒದಗಿಸುವುದು)

(ಈ) ಈ ಜಿಲ್ಲೆಯಲ್ಲಿ ಪ್ರವಾಸೋದ್ಯಮವನ್ನು ಉತ್ತೇಜಿಸುವಲ್ಲಿ ಸರ್ಕಾರ ಯಾವ ಕ್ರಮ ಕೈಗೊಂಡಿದೆ; ಕೈಗೊಂಡಿದ್ದಲ್ಲಿ, ಸಂಪೂರ್ಣ ಮಾಹಿತಿ ಒದಗಿಸುವುದು?

## ಪುನರ್ವಸತಿ ಕೇಂದ್ರಗಳು

**ಶ್ರೀ ಪಾಟೀಲ್ ಜೆ ಟಿ (ಬೀಳಗಿ) –**

೧೫ (೨೪೭) ಮಾನ್ಯ ಉಪ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಆಲಮಟ್ಟಿ ಜಲಾಶಯದ ೩ನೇ ಹಂತದಲ್ಲಿ ಮುಳುಗಡೆಯಾಗುವ ಹಳ್ಳಿಗಳು ಹಾಗೂ ಈಗಾಗಲೇ ಮುಳುಗಡೆಯಾದ ಪ್ರದೇಶದ ನಿರಾಶ್ರಿತರ ಪುನರ್ ವಸತಿ ಕೇಂದ್ರಗಳಲ್ಲಿ ಮೂಲಭೂತ ಸೌಲಭ್ಯಗಳನ್ನು ಸಂಪೂರ್ಣವಾಗಿ ಒದಗಿಸಬೇಕಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಹಾಗಿದ್ದಲ್ಲಿ, ಈ ಪುನರ್ ವಸತಿ ಕೇಂದ್ರಗಳಲ್ಲಿ ಅತ್ಯವಶ್ಯಕವಾದ ಮೂಲಭೂತ ಸೌಲಭ್ಯಗಳನ್ನು ಕಲ್ಪಿಸುವ ಈ ಕಾಮಗಾರಿಗಳನ್ನು ಯಾವ ಕಾಲಮಿತಿಯಲ್ಲಿ ಪ್ರಾರಂಭ ಮಾಡಲಾಗುವುದು? (ವಿವರ ನೀಡುವುದು)

**ಎಂ.ಕೆ. ವಿಶಾಲಾಕ್ಷಿ**
ಕಾರ್ಯದರ್ಶಿ
ಕರ್ನಾಟಕ ವಿಧಾನಸಭೆ

ಸರ್ಕಾರಿ ಮುದ್ರಣಾಲಯ, ವಿಕಾಸಸೌಧ ಘಟಕ, ಬೆಂಗಳೂರು ಕಾ.ಸೂ. 842 – ಪಿ2

**List of Questions for Oral Answers**

**Total No. of Questions - 15**

# LIST - 01

# KARNATAKA LEGISLATIVE ASSEMBLY

## SIXTEENTH ASSEMBLY

## THIRD SESSION

## Tuesday, 13th February, 2024

---

### GROUP - B

1. Hon'ble Chief Minister
2. Hon'ble Deputy Chief Minister
3. Minister for Home
4. Minister for Law, Parliamentary Affairs and Legislation, Tourism
5. Minister for Labour
6. Minister for Excise
7. Minister for Minor Irrigation, Science and Technology

---

### RELEASING THE GRANT FOR WORKS

**SRI S.N.NARAYANASWAMY K.M. (BANGARAPET) -**

01 (62) Will the Minister for Minor Irrigation, Science and Technology be pleased to state:-

a) the particulars of head of accounts under which the works of Minor irrigation department have been undertaken in the limits of Bangarpet Assembly Constituency during the last three years; (complete information be furnished)

b) the number of proposals that have been received by the Minor irrigation department from this constituency; (work-wise information be furnished)

c) whether the Government will take action to release the grant for the proposed works;

d) if so, the time limit within which these works would be completed?

## COLLAPSING THE CANALS

**SRI CEMENT MANJU (SAKALESHPUR) -**

02 (281) Will the Deputy Chief Minister be pleased to state:-

a) whether it has come to the notice of the Government that main canal, laterals and distributaries of Yagachi Reservoir in Hassan district are dilapidated and being collapsed; (information be furnished)

b) the number of years ago this reservoir was constructed? the number of times have these canals been modernized since the construction of this reservoir; the approximate cost incurred therefor; (information be furnished)

c) the extent of acres of land covered by this catchment area; whether the water is supplied according to the farmer's demand; the particulars of area covered by this reservoir and deprived of irrigation facilities; (information be furnished)

d) the time by which the Government would take steps to modernize the main canal, laterals and distributaries of this Yagachi reservoir with the interest of farmers? (complete information be furnished)

## ILLICIT LIQUOR SALE

**SRI DHEERAJ MUNIRAJU (DODDABALLAPURA) -**

03 (394) Will the Minister for Excise be pleased to state:-

a) whether it has come to the notice of the Government that the illicit liquor is brought from neighboring states and is being sold house to house in Doddaballapur;

b) if so, the number of cases that have been registered in different police stations of Doddaballapur since last three years till date; the number of persons against whom

the action has been taken in such cases; the particulars of cases filed against the said persons;

c) the number of bars and wine shops selling illicit liquor have been closed;

d) the action taken by the Government to prevent illicit liquor sale?

**BASIC FACILITIES FOR MARAVANTHE BEACH**

**SRI GURURAJ SHETTY GANTIHOLE (BYNDOOR) -**

04 (67) Will the Minister for Law, Parliamentary Affairs and Legislation, Tourism be pleased to state:-

a) whether it has come to the notice of the Government that the problem of parking, safety of tourists, etc., is being caused in Trasi – Maravanthe Beach in the limits of Byndoor Assembly Constituency;

b) if so, the steps taken by the Government to correct the existing parking system at Maravanthe Beach which is one of the attractive coastal beaches of the country; (details be furnished)

c) if not, whether the Government will take action to provide adequate parking facilities, as there is ample Government land available and many tourists are come to this beach everyday and other vehicles including tourist vehicles are being parked on the side of the national highway due to lack of parking space, which leads to a hindrance to the safety of the tourists;

d) whether the Government would take steps to provide road lights and other safety measures for the convenience of tourists, since the national highway passes next to Maravanthe Beach?

**CAUVERY DRINKING WATER CONNECTION**

**SRI RAMAMURTHY C.K. (JAYANAGAR) -**

05 (54) Will the Deputy Chief Minister be pleased to state:-

a) whether it has come to the notice of the Government that the cauvery drinking water connection has not been provided to the newly constructed houses in slums coming in the limits of Jayanagar Assembly Constituency; (information be furnished)

b) if so, what are the technical difficulties in providing the water connection; (complete information be furnished)

c) if so, the number of houses remained pending for Cauvery drinking water connection; the time limit within which Government would take steps to provide water connection to the remaining houses? (complete information be furnished)

## WORKS UNDER KHARLAND PROJECT

**SRI GURME SURESH SHETTY (KAPU) -**

06 (56) Will the Minister for Minor Irrigation, Science and Technology be pleased to state:-

(a) whether it has come to the notice of the Government that the farmers are distressed due to loss of fertility of the agricultural land and crop loss due to sea salt water flowing to the agricultural land through the river in the coastal area;

(b) if so, the quantum of grant that has been sanctioned to Udupi district in the last 3 years for dam/barrage works under Kharland project to prevent sea salt water flowing in to agricultural land through river;

(c) the present stage of the works under taken by the Government according to the grant sanctioned under this Kharland project; (details of progress of works be furnished in respect of Udupi district)

(d) if the work is not completed, the technical difficulties to achieve the progress?

## LABOUR CARD TO WORKERS

**SRI SIDDU SAVADI (TERDAL) -**

07 (234) Will the Minister for Labour be pleased to state :-

(a) the number of workers who have obtained the labour cards in Terdal constituency; the particular of workers who have been registered and obtained the cards; (complete information be furnished)

(b) the different kind of labours who are eligible to obtain the labour card;

(c) the particulars of norms to avail the labour cards;

(d) the number of times in a year the labour card would be issued after receiving the applications from the workers and who has the authority to issue this labour card? (complete information be furnished)

## WORKS OF UPPER BHADRA PROJECT

**SRI SURESH BABU C.B. (CHIKKANAYAKANAHALLI) -**

08 (224) Will the Deputy Chief Minister be pleased to state :-

(a) the volume of water that has been allocated by the upper Bhadra project to Chikkanayakanahalli assembly constituency;

(b) the number of lakes and the catchment areas for which water is being provided by this project;

(c) the quantum of grant that has been earmarked by the Government since 2022 to 2024 till date for said works; the present stage of this work; the amount spent for this work so far;

(d) the reasons for not speed up the drip irrigation works taken up under this project so far?

## RELEASING THE GRANT

**SRI VENKATASHIVA REDDY G.K. (SRINIVASAPUR) -**

09 (279) Will the Minister for Minor Irrigation, Science and Technology be pleased to state :-

(a) the grant sanctioned by the Minor irrigation department in the years 2021-22 and 2022-23 to Srinivasapur assembly constituency has been withheld, the time by when said grant it would be released;

(b) a proposal has been submitted to the Government for releasing the grant which was withheld, the steps taken by the Government in this regard;

(c) the action taken by the Government to release the grant for works at tender level and yet to be commenced;

(d) the quantum of grant that has been released under the various head of accounts of Minor irrigation department to this assembly constituency in the current year? (details be furnished)

## DEVELOPMENT OF JALADURGA AREA

**SRI MANAPPA D. VAJJAL (LINGASAGUR) -**

10 (226) Will the Minister for Law, Parliamentary Affairs and Legislation, Tourism be pleased to state :-

(a) whether it has come to the notice of the Government that the Jaladurga area in Lingasagur taluk of Raichur district is a famous tourist destination;

(b) if so, whether it has come to the notice of the Government that the large number of state, inter state and foreign tourists are visiting to the said tourist destination;

(c) if so, the steps taken by the Government to identify this tourist destination and for their development;

(d) the difficulties to the Government to undertake development works of this area? (complete details be furnished)

## YETTINAHOLE PROJECT

**SRI SURESH H.K. (BELUR) -**

11(217) Will the Deputy Chief Minister be pleased to state :-

(a) the present stage of the project to fill up the lakes from Yettinahole project which is a mega irrigation project

and passing through the hundreds of villages in the limits of Bikkodu, Madihalli, Javagal hoblis of Belur assembly constituency;

(b) whether it has come to the notice of the Government that roads of many villages in the constituency have been deteriorated due to heavy vehicles being used in the Yettinahole project work;

(c) if so, the steps taken by the Government to develop the roads damaged by said project; (complete details be furnished)

(d) whether it has come to the notice of the Government that the Ranagatta project to fill up the lakes of Madihalli, Halebidu hobli is sub standard and going at a slow pace;

(e) if so, the steps taken by the Government in this regard? (details be furnished)

## UPGRADATION OF POLICE OUT POST

**SRI SRINIVASA G.H. (TARIKERE) -**

12 (72) Will the Minister for Home be pleased to state:-

(a) whether it has come to the notice of the Government that Ajjampura town of Tarikere assembly constituency has been formed as a new taluk and the entire taluk has only one police station and delay being caused to solve the criminal cases due to increasing the burden of work;

(b) if so, the impediments to up gradation of police out post located in Shivani hobli centre in to a police station?

## MODERNIZATION OF MADAGA-MASUR CANAL

**SRI U.B.BANAKAR (HIREKERUR) -**

13 (36) Will the Deputy Chief Minister be pleased to state :-

(a) the present stage of the proposal submitted to the Government for modernization of Madaga-Masur lake canals; (details of the proposal be furnished)

(b) whether the Government will take action to sanction of this project immediately?

## PROMOTING TOURISM

**SRI MAHESH TENGINAKAI (HUBLI-DHARWAD CENTRAL) -**

14 (290) Will the Minister for Law, Parliamentary Affairs and Legislation, Tourism be pleased to state :-

(a) whether the Government has evolved any plan for the development of Nrupatunga hill station by Tourism department coming in the limits of Hubli-Dharwad central assembly constituency; if so, complete details of the plan be furnished; if not, the steps likely to be taken by the Government to develop this area;

(b) whether there is a proposal before the Government to develop the famous Unakal lake and promote tourism with in the limits of said constituency; if so, the steps taken by the Government in this regard; (complete information be furnished)

(c) the number of tourist spots are located in Dharwad district; (details be furnished)

(d) the steps taken by the Government to promote tourism in said district; if so, complete information be furnished?

## REHABILITATION CENTERS

**SRI J.T.PATIL (BILGI) -**

15 (247) Will the Deputy Chief Minister be pleased to state:-

(a) whether it has come to the notice of the Government that the basic facilities should be fully provided in the villages that will be submerged in the 3rd phase of Alamatti reservoir and the rehabilitation centers that have already been submerged;

(b) if so, the time limit within which these works would be commenced for providing basic facilities in the said rehabilitation centers? (details be furnished)

**M.K. Vishalakshi**
Secretary
Karnataka Legislative Assembly

Government Press, Vikasa Soudha Unit, Bengaluru, WD-858 Copies